ಬರವಣಿಗೆ ಮತ್ತು ಛಾಯಾಗ್ರಹಣದ ಹವ್ಯಾಸ ಅಂಟಿಸಿಕೊಂಡಿರುವ ಎಚ್. ಭರತ್‌ಕುಮಾರ್ ಪತ್ರಕರ್ತರಾಗಿ ವೃತ್ತಿ ಜೀವನ ಆರಂಭಿಸಿದರು. ಪ್ರಸ್ತುತ ಸಾರ್ವಜನಿಕ ನೀತಿ ನಿರೂಪಣೆ ಹಾಗೂ ಸಂವಹನ ತಜ್ಞರಾಗಿ, ನವೋದ್ಯಮಗಳ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಚೆನ್ನೈನಲ್ಲಿರುವ ವಿದೇಶಿ ದೂತಾವಾಸವೊಂದರಲ್ಲಿ ರಾಜಕೀಯಆರ್ಥಿಕ ವಿಶ್ಲೇಷಕರಾಗಿ ಹಾಗೂ ಮಾಧ್ಯಮ ಸಂಪಾದಕರಾಗಿಯೂ ಕೆಲಸ ಮಾಡಿದ ಅನುಭವಿ.

ಹತ್ತಿರ ಬರಲು ಹತ್ತು ನಿಮಿಷವೇ ಹಿಡಿಯಿತು. ಧೈರ್ಯ ಮಾಡಿ, ಏನು ಎತ್ತ ಎಂದು ವಿಚಾರಿಸಿದೆ. ಸುತ್ತಲ ಮಂದಿ, 'ನನ್ನನ್ನು ಕ್ಷುದ್ರ ಜೀವಿ, ಅರಿವುಗೇಡಿ' ಎಂಬಂತೆ ಕಣ್ಣಲ್ಲೇ ತಿವಿಯುತ್ತಿರುವಾಗಲೇ, 'ನಾವು ಸಾಲಲ್ಲಿ ನಿಂತ ಎಲ್ಲರ ಹೆಸರನ್ನು ಬರೆದು, ನಂಬರ್ ಕೊಡುತ್ತಿದ್ದೇವೆ. ಅಕಸ್ಮಾತ್, ಏನಾದರೂ, ವ್ಯತ್ಯಾಸವಾಗಿ ಈ ಲೈನು ಚಲ್ಲಾಪಿಲ್ಲಿಯಾದರೆ, ಮತ್ತೇ ಸಾಲುಗಟ್ಟಲು ಏನಾದರೂ ಆಧಾರ ಬೇಕಲ್ಲ' ಕಟುವಾಗಿ ಹೇಳಿದ.

'ಏನು... ಚಲ್ಲಾಪಿಲ್ಲಿಯಾಗಲು ಹೇಗೆ ಸಾಧ್ಯ... ಇನ್ನೊಂದೇ ಗಂಟೆಯಲ್ಲಿ ಅರ್ಜಿ ಕೊಡ್ತಾರಲ್ಲ?'

'ಹೇಳಕಾಗಲ್ಲ ಸಾರ್. ಮಳೆ ಬರಬಹುದು, ಗಾಳಿ ಬರಬಹುದು, ಅಥವಾ ಗಲಾಟೆ ಜಾಸ್ತಿಯಾದಾಗ, ಮತ್ತೊಂದು ಸಾಲು ನಿರ್ಮಾಣವಾಗಬಹುದು' ಎಂದು ತನ್ನ ಅಂದಾಜನ್ನು ವಿವರಿಸಿದ. ಇನ್ನೇನು ಈವತ್ತೋ ನಾಳೆಯೋ ಬರ್ತೇನೆ ಎಂದು ತ್ಸುನಾಮಿಯೋ ಅಥವಾ ಚಂಡಮಾರುತವೋ ಈತನ ಕಿವಿಯಲ್ಲಿ ಹೇಳಿ ಹೋದಷ್ಟು ಆತ್ಮವಿಶ್ವಾಸದಿಂದ ಹೊರ ಸೂಸುತ್ತಿತ್ತು ಆತ ಆಲೋಚನೆಗಳು.

'ಅಂದಹಾಗೆ... ನೀವು?' ಎಂಬ ಪ್ರಶ್ನೆ ಆತನಿಗೆ ಹಿಡಿಸಲೇ ಇಲ್ಲ. ಕೊಂಕನ್ನು ನನ್ನ ಕಣ್ಣಲ್ಲಿ ಕಂಡನೋ, ಧನಿಯಲ್ಲಿ ಕಂಡನೋ ಗೊತ್ತಿಲ್ಲ. 'ಎಂತ ಉಪದ್ರ ಮಾರಾಯ್ರೆ...' ಎಂದು ಕಣ್ಣಲ್ಲೇ ಹೇಳಿ, ಬರೆಯುತ್ತಲೇ 'ನಾವೂ ಕೂಡಾ, ಅರ್ಜಿಗಾಗೇ ಬಂದ ಪೇರೆಂಟ್ಸು... ಆದರೆ, ಸಮಾಜ ಸೇವೆ ಮಾಡೋಣ ಎಂದು ಈ ಕೆಲಸ ಮಾಡ್ತಿದ್ದೇವೆ. ನಿಮ್ಮ ನಂಬರ್ 322' ಎಂದು ಮುಂದೆ ಸಾಗಿದ.

ನನಗೆ ಬಲು ಸಮಾಧಾನವಾಯಿತು. ನನ್ನ ಮುಂದೆ ಬರೀ 321 ಜನ. ಸುಮಾರು ಅಷ್ಟೇ ಜನ ನನ್ನ ಹಿಂದೆಯೂ ನಿಂತಿದ್ದರು. 'ಮುಂದೆ ಮುನ್ನೂರು ದಂಡು, ಹಿಂದೆ ಇನ್ನೂರು ದಂಡು... ನಿನ್ನ ಸಮನಾರು ಇಲ್ಲವಲ್ಲೋ... ಮೈಸೂರಾ ದೊರೆಯೇ' ಎಂದು ಹಾಡು ಹಾಡುತ್ತಾ, ದೊರೆತನ ಅನುಭವಿಸಿದೆ.

ಬರುತ್ತಿದ್ದಂತೆ ಗಾಬರಿ ಹುಟ್ಟಿಸಲು ಹಲವು ಕಥೆಗಳನ್ನು ಹೇಳಿದ್ದರು. 'ಅಯ್ಯೋ... ನಿನ್ನೆ ರಾತ್ರಿ 10.30ರ ಹೊತ್ತಿಗಾಗಲೇ 150 ಜನ ಜಮಾಯಿಸಿದ್ದರು. ನೀವಿಷ್ಟು ಲೇಟಾಗಾ ಬರೋದು' ಎಂದು ಬಿಪಿ ಹೆಚ್ಚಿಸಲು ಯತ್ನಿಸಿದ್ದರು. 'ಬೆಳಿಗ್ಗೆ ನಾಕೂವರೆಗೆ ಬರಬೇಕೆಂದಿದ್ದೆ, ಆಗಲಿಲ್ಲ. ಅಷ್ಟು ದೂರದಿಂದ ಬರೊವಷ್ಟು ಹೊತ್ತಿಗೆ, ಇಷ್ಟು ಹೊತ್ತಾಗಿ ಬಿಟ್ಟಿತು' ಎಂದು ಹಲುಬುತ್ತಿದ್ದ ಒರಿಸ್ಸಾ ಗೆಳೆಯನಿಗೆ ಸಮಾಧಾನ ಹೇಳಿದೆ. ಆತನೊಡನೆ ವಂಗ ಬಂಧುವೊಬ್ಬ ಸೇರಿಕೊಂಡು, ಆತಂಕ ಹೆಚ್ಚಿಸಿದ. ಏನು ಸಮಾಧಾನ ಮಾಡಿದರೂ, ಆತ ಕೇಳಲೊಲ್ಲ. 'ಎಷ್ಟು ಹೊತ್ತಿನಿಂದ ಅರ್ಜಿಗಾಗಿ ನೀವು ಕಾದಿರಿ ಎಂಬ ಕಾಲಮ್ಮೇನೂ ಇರೊಲ್ಲ. ಹಂಗಿದ್ದಾಗ, ಎಷ್ಟೊತ್ತಿಗೆ ಬಂದರೂ ಒಂದೇ, ಅರ್ಜಿ ಸಿಕ್ಕಿದರಾಯಿತು' ಎಂದು ಸಮಾಧಾನ ಹೇಳಿದೆ. ಅದಕ್ಕೆ 'ಆರ್ ಯೂ ಶ್ಯೂರ್...' ಎಂದ. 'ಶ್ಯೂರ್...' ಎಂದು ಮತ್ತೆ ಮಾತು ಮುಗಿಸಿ, ಅತ್ತಿತ್ತ ನೋಡಲಾರಂಭಿಸಿದೆ.

ಥರಾವಾರಿ ಜನ ಥರಾವಾರಿ ಡ್ರೆಸ್ಸುಗಳಲ್ಲಿ ಬಂದಿದ್ದರು. ಕೆಲವರದು ಪಕ್ಕಾ ಪ್ಲಾನಿಂಗು. ಸಾಲಿನಲ್ಲಿ ನಿಲ್ಲುವುದಕ್ಕಿಂತ ಕೂಡುವುದೇ ಲೇಸೆಂದು, ಕೂಡಲು ಪುಟಾಣಿ ಜಮಖಾನ, ಹಿಂದೂವಿನ ಜೊತೆಗೆ ಮತ್ತೊಂದು ಪೇಪರು, (ಚೆನ್ನೈಯಿಗರ ನಿಯತ್ತು ಅಂದರೆ ಅದು, ಹಿಂದೂ ಓದಲಿಕ್ಕೆ, ಮತ್ತೊಂದು ಹಾಸಲಿಕ್ಕೆ. ಒಂದು ಮಸ್ತಕಕ್ಕೆ, ಇನ್ನೊಂದು ಮತ್ತೊಂದು ತುದಿಗೆ) ಫ್ಲಾಸ್ಕಿನಲ್ಲಿ ಫಿಲ್ಟರ್ ಕಾಫಿ. ಕಿವಿಗೆ ಐಪಾಡ್ ಇಯರ್ ಫೋನ್, ಓಡಮಾಸ್ ಎಂಬ ಸೊಳ್ಳೆ ನಿರೋಧಕ ಸ್ಪ್ರೇ, ತುಂಬು ತೋಳಿನ ಅಂಗಿ, ಮದರಾಸಿನ ಮಂಜು ತಲೆಗೆ ತಗುಲದಿರಲಿ ಎಂದು ಟೊಪ್ಪಿ, ಕಿವಿಗೆ ಹೋಗದಿರಲಿ ಎಂದು ರಸ್ತೆ ಬದಿ ಈಚೆಗೆ